**ಮಾನ್ಯ 1ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.2 ನೇ ನ್ಯಾಯಾಲಯ, ತುಮಕೂರು.**

**ಉಪಸ್ಥಿತರು : ಶ್ರೀಮತಿ, ಲಕ್ಷ್ಮೀ ನಿಂಗಪ್ಪ .ಗರಗ,**
**ಬಿ.ಕಾಂ.ಎಲ್.ಎಲ್.ಬಿ.ಸ್ಪೆಷಲ್.,**
**1ನೇ ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.2ನೇ ನ್ಯಾಯಾಲಯ,**
**ತುಮಕೂರು.**

**ದಿನಾಂಕ: 10ನೇ ಜುಲೈ 2015**

**ಸಿ.ಸಿ.ಸಂಖ್ಯೆ: 989/2012**

ಫಿರ್ಯಾದುದಾರರು : ಸರ್ಕಾರದ ಪರವಾಗಿ ಗ್ರಾಮಾಂತರ
ಪೋಲೀಸ್ ಠಾಣೆ ತುಮಕೂರು
(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

**ಆರೋಪಿ** : 1.ಮಂಜ ಅಲಿಯಾಸ್ ಮಂಜುನಾಥ
ಅಲಿಯಾಸ್ ಡಿಸ್ಕೋ ಮಂಜ ಅಲಿಯಾಸ್
ಜುಟ್ಟು ಮಂಜ, ಬಿನ್.ಲೇಟ್.ಶಿವಶಂಕರಪ್ಪ
೨೬ ವರ್ಷ, ಕೂಲಿ ಮತ್ತು ಪ್ಲಾಸ್ಟಿಕ್ ಆಯುವ
ಕೆಲಸ, ಚನ್ನಪ್ಪನಪಾಳ್ಯ ತುಮಕೂರು.

2. ರಮೇಶ್ ಬಿನ್.ಲೇಟ್ ಜಯರಾಮಯ್ಯ
22 ವರ್ಷ, ಕೂಲಿ ಮತ್ತು ಪ್ಲಾಸ್ಟಿಕ್ ಆಯುವ ಕೆಲಸ,
ವಾಸ ಗಂಗನಾಲ, ಕೋರಾ ಹೋಬಳಿ
ತುಮಕೂರು ತಾ.

(ಆರೋಪಿ-1 ರವರ ವಿರುದ್ದ ಪ್ರಕರಣವನ್ನು
ವಿಭಜಿಸಲಾಗಿದೆ)

1. ಪ್ರಕರಣದ ದಿನಾಂಕ : 24-07-2011

2. ಪ್ರಕರಣದ ವರದಿಯ ದಿನಾಂಕ : 3:4-09-2011

3. ಫಿರ್ಯಾದಿಯ ಹೆಸರು : ಲಿಂಗಾನಂದಸ್ವಾಮಿ

4. ಆರೋಪಿತನ ಬಂಧನದ ದಿನಾಂಕ : 01-10-2011

5. ಆರೋಪಿತನ ಬಿಡುಗಡೆಯ ದಿನಾಂಕ: ಬಾಡಿ ವಾರಂಟಿನ ಮೇರೆಗೆ ನ್ಯಾಯಾಂಗ ಬಂಧನ

6. ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ 01-03-2013

7. ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ: 11-03-2015

8. ದೂರು ನೀಡಿರುವ ಅಪರಾಧ : ಭಾರತೀಯ ದಂಡ ಸಂಹಿತೆ ಕಲಂ 457, 380

9. ನ್ಯಾಯಾಧೀಶರ ಅಭಿಪ್ರಾಯ : ಭಾರತೀಯ ದಂಡ ಸಂಹಿತೆ ಕಲಂ 457, 380 ರೀತ್ಯಾ ದಂಡನೀಯವಾದ ಅಪರಾಧಗಳ ಆರೋಪಗಳಿಂದ ಆರೋಪಿಯನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಆರೋಪಿಯನ್ನು ಬಿಡುಗಡೆಗೊಳಿಸಲಾಗಿದೆ.

9. ಸರ್ಕಾರದ ಪರವಾಗಿ : ಸಹಾಯಕ ಸರ್ಕಾರಿ ಅಭಿಯೋಜಕರು

10. ಆರೋಪಿತರ ಪರವಾಗಿ : ಶ್ರೀಮತಿ ಬಿ.ಎಂ.ಸಿಂಧುಶ್ರೀ

# ತೀ ರ್ಪು

ಸಬ್ ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಗ್ರಾಮೊಂತರ ಪೊಲೀಸ್ ಠಾಣೆ, ತುಮಕೂರು ರವರು ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 457, 380ರ ಅಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ ፥**

ದಿನಾಂಕ 24-07-2011 ಮತ್ತು 25-7-2011 ರ ಮಧ್ಯೆ ರಾತ್ರಿ ವೇಳೆ ಆರೋಪಿಗಳಿಬ್ಬರೂ ತುಮಕೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಗಂಗಸಂದ್ರ ಗ್ರಾಮದಲ್ಲಿ ವಾಸವಾಗಿರುವ ಸಾಕ್ಷಿ-1 ರವರ ವಾಸದ ಮನೆಯ ಮೇಲ್ಛಾವಣಿ ಹೆಂಚುಗಳನ್ನು ತೆಗೆದು ಒಳ ನುಗ್ಗಿ ಮನೆಯಲ್ಲಿದ್ದ ಬೀರುವನ್ನು ಹೊಡೆದು ಅದರಲ್ಲಿದ್ದ ಸುಮಾರು 3,000-00 ನಗದು ಹಣ ಮತ್ತು 30,000-00 ರೂ. ಬೆಲೆಯ ಒಟ್ಟು ಸುಮಾರು 507 ಗ್ರಾಂ ತೂಕದ ಬೆಳ್ಳಿಯ ಮಾಲುಗಳು ಒಟ್ಟು 33,000-00 ರೂ. ಬೆಲೆಯ ಮಾಲುಗಳನ್ನು ಕಳುವು ಮಾಡಿಕೊಂಡು ಹೋಗಿರುತ್ತಾರೆ. ಚಾ.ಸಾ-1 ರವರು ದಿಃ 26-07-2011 ರಂದು ಪ್ರಥಮ ವರ್ತಮಾನ ಹೇಳಿಕೆಯನ್ನು ಪೋಲೀಸರಿಗೆ ನೀಡಿದ್ದು, ಅದನ್ನು

ಗ್ರಾಮಾಂತರ ಪೋಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 259-2011 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 457, 380 ರಡಿಯಲ್ಲಿ ಪ್ರಕರಣ ದಾಖಲಿಸಿ ಸ್ಥಳ ಮಹಜರ್ ಮಾಡಿ, ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು, ತನಿಖೆ ಪೂರ್ಣಗೊಂಡ ನಂತರ ಆರೋಪಿಗಳ ವಿರುದ್ಧ ಚಾ.ಸಾ- 14 ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. 2ನೇ ಆರೋಪಿ ಬಾಡಿ ವಾರಂಟಿನ ಮೇರೆಗೆ ನ್ಯಾಯಾಂಗ ಬಂಧನದಲ್ಲಿರುತ್ತಾರೆ.

4. ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ನ್ಯಾಯಾಲಯ ಭಾರತೀಯ ದಂಡ ಸಂಹಿತೆ ಕಲಂ 457, 380 ರ ಅಪರಾಧಕ್ಕೆ ಸಂಜ್ಞೆಯುತೆಯನ್ನು ತೆಗೆದುಕೊಂಡಿದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗಳಿಗೆ ದೋಷಾರೋಪಣ ಪಟ್ಟಿಯ ನಕಲನ್ನು ಜಾರಿಗೊಳಿಸಿದೆ. ದೋಷಾರೋಪಣೆಯನ್ನು ರಚಿಸುವ ಪೂರ್ವದಲ್ಲಿ ವಾದವನ್ನು ಆಲಿಸಲಾಯಿತು. ಆದರೆ ಆರೋಪಿಗಳನ್ನು ದೋಷಾರೋಪಣೆ ರಚಿಸುವ ಪೂರ್ವದಲ್ಲಿಯೇ ವಿಮೋಚನೆ ಮಾಡಲು ಯಾವುದೇ ಸಕಾರಣಗಳು ಈ ನ್ಯಾಯಾಲಯಕ್ಕೆ ಕಂಡು ಬರದ ಕಾರಣ ದೋಷಾರೋಪಣೆಯನ್ನು ರಚಿಸಲಾಯಿತು.

5. ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 457, 380 ರ ಅಪರಾಧಕ್ಕೆ ದೋಷಾರೋಪಣೆಯನ್ನು ರಚಿಸಿ ಓದಿ ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ವಿವರಿಸಿ ಹೇಳಿದ್ದು ಆರೋಪಿಗಳು ತಾವು ತಪ್ಪು ಮಾಡಿರುವುದಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿರುತಾರೆ.

6. ಅಭಿಯೋಜನೆಯು ಆರೋಪಿಗಳ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತು ಪಡಿಸುವ ಸಲುವಾಗಿ ಪ್ರಾ.ಸಾ-1 ರಿಂದ 6 ರವರನ್ನು ವಿಚಾರಣೆಗೊಳಪಡಿಸಿ ನಿ.ಪಿ-1 ರಿಂದ 11 ನ್ನು ಮತ್ತು ಮು.ಮಾ.1 ರಿಂದ 5ನ್ನು ಗುರ್ತಿಸಿಕೊಂಡಿತು.

7. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿಗಳ ಹೇಳಿಕೆಯನ್ನು ದಾಖಲು ಮಾಡಿದ್ದು ಅದರಲ್ಲಿ ಆರೋಪಿಗಳು ಅಭಿಯೋಜನೆಯ ಪರ ಸಾಕ್ಷಿದಾರರು ಆರೋಪಿಗಳ ವಿರುದ್ಧವಾಗಿ ನುಡಿದಿರುವ ಸಾಕ್ಷ್ಯವನ್ನು ಅಲ್ಲಗಳೆದಿದ್ದು ತಮ್ಮ ಪರ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದಕ್ಕೆ ಮುಂದೂಡಲಾಯಿತು.

8. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಮಾನ್ಯ ಆರೋಪಿಗಳ ಪರ ವಕೀಲರ ವಾದವನ್ನು ಆಲಿಸಿ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ.

**9.** ಈಗ ನಿರ್ಣಯಿಸಬೇಕಾದ ಅಂಶಗಳು ಈ ಕೆಳಗಿನಂತಿವೆ :

**ಅಂಶ: (1 )** ದಿನಾಂಕ 24-07-2011 ಮತ್ತು 25-7-2011 ರ ಮಧ್ಯೆ ರಾತ್ರಿ ವೇಳೆ ಆರೋಪಿಗಳಿಬ್ಬರೂ ತುಮಕೂರು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಗಂಗಸಂದ್ರ ಗ್ರಾಮದಲ್ಲಿ ವಾಸವಾಗಿರುವ ಸಾಕ್ಷಿ-1 ರವರ ವಾಸದ ಮನೆಯ ಮೇಲ್ಛಾವಣಿ ಹೆಂಚುಗಳನ್ನು ತೆಗೆದು ಒಳ ನುಗ್ಗಿ ಭಾರತೀಯ ದಂಡ ಸಂಹಿತೆ ಕಲಂ 457 ರ ವಿಧಿಗಳನ್ವಯ ದಂಡನೀಯವಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ: (2 )** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಿಬ್ಬರು ಸಾಕ್ಷಿ-1 ರವರ ವಾಸದ ಮನೆಯ ಮೇಲ್ಛಾವಣಿ ಹೆಂಚುಗಳನ್ನು ತೆಗೆದು ಒಳ ನುಗ್ಗಿ ಮನೆಯಲ್ಲಿದ್ದ ಬೀರುವನ್ನು ಹೊಡೆದು ಅದರಲ್ಲಿದ್ದ ಸುಮಾರು 3,000-00 ನಗದು ಹಣ ಮತ್ತು 30,000-00 ರೂ. ಬೆಲೆಯ ಒಟ್ಟು ಸುಮಾರು 507 ಗ್ರಾಂ ತೂಕದ ಬೆಳ್ಳಿಯ ಮಾಲುಗಳು ಒಟ್ಟು 33,000-00 ರೂ. ಬೆಲೆಯ ಮಾಲುಗಳನ್ನು ಕಳುವು ಮಾಡಿಕೊಂಡು ಹೋಗಿ ಭಾರತೀಯ ದಂಡ ಸಂಹಿತೆ ಕಲಂ 380 ರ ವಿಧಿಗಳನ್ವಯ ದಂಡನೀಯವಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ?

ಅಂಶ:( 3 ) ಯಾವ ಆದೇಶ ?

10. ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸಿರುವ ಮೇಲ್ಕಂಡ ಅಂಶಗಳಿಗೆ ಕೆಳಕಂಡ ಕಾರಣಗಳಿಗಾಗಿ ಕೆಳಕಂಡಂತೆ ಈ ನ್ಯಾಯಾಲಯವು ಉತ್ತರಿಸಿದೆ.

**ಅಂಶ-1-2 ಃ ನಕಾರಾತ್ಮಕವಾಗಿ.**

**ಅಂಶ-3 ಃ ಅಂತಿಮ ಆದೇಶದಂತೆ**
**ಈ ಕೆಳಕಂಡ ಕಾರಣಗಳಿಗಾಗಿ**

**ಃ ಕಾ ರ ಣ ಗ ಳು ಃ**

11. ಅಂಶ-1 ಮತ್ತು 2ಃ- ಈ ಎರಡು ಅಂಶಗಳು ಒಂದಕ್ಕೊಂದು ಸಂಬಂಧವಿರುವುದರಿಂದ, ಪುನರಾವರ್ತನೆಯಾಗದಂತೆ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳು ತನಿಖೆ ಕಾರ್ಯ ಪೂರ್ಣಗೊಳಿಸಿ ಇಬ್ಬರು ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ನ್ಯಾಯಾಲಯ ಭಾ.ದಂ.ಸಂ. ಕಲಂ 457 ಮತ್ತು 380 ಅಪರಾಧಕ್ಕೆ ಸಂಜ್ಞೆ ತೆಗೆದುಕೊಂಡು ಆರೋಪಿಗಳ ವಿರುದ್ಧ ಭಾ.ದಂ.ಸಂ. ಕಲಂ 457 ಮತ್ತು 380 ಅಪರಾಧಕ್ಕೆ ದೋಷಾರೋಪಣೆಯನ್ನು ರಚಿಸಿ ವಿವರಿಸಿ ಹೇಳಿದ್ದು ಆರೋಪಿಗಳು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಉತ್ತರಿಸಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಇಡಲಾಯಿತು.

12. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ರುಜುವಾತು ಪಡಿಸುವ ಹಿನ್ನಲೆಯಲ್ಲಿ ದೋಷಾರೋಪಣೆಪಟ್ಟಿಯಲ್ಲಿ ನಮೂದಿಸಿದ ಒಟ್ಟು 13 ಜನ

ಸಾಕ್ಷಿದಾರರನ್ನು ಹಾಜರುಪಡಿಸಿದ್ದು ಅದರಲ್ಲಿ 6 ಜನ ಸಾಕ್ಷಿದಾರರನ್ನು ಪ್ರಾಸಾ-1 ರಿಂದ 6 ರವರನ್ನು ವಿಚಾರಣೆಗೆ ಗುರಿಪಡಿಸಿಕೊಂಡು ದಾಖಲಾತಿಗಳನ್ನು ನಿ.ಪಿ.1 ರಿಂದ 11 ಎಂದು ಮತ್ತು ಮು.ಮಾ.1 ರಿಂದ 5 ಅಂತ ಗುರ್ತಿಸಿಕೊಂಡಿದ್ದಾರೆ. ಚಾ.ಸಾ-2, 7 ರಿಂದ 10 ಮತ್ತು 12 ಸಾಕ್ಷಿದಾರರನ್ನು ಅಭಿಯೋಜನೆಯ ಕೋರಿಕೆಯ ಮೇರೆಗೆ ಸಾಕ್ಷಿ ವಿಚಾರಣೆಗೆ ಅನವಶ್ಯಕವೆಂದು ಕೈ ಬಿಡಲಾಗಿದೆ. ಚಾಸಾ-6 ಸಾಕ್ಷಿದಾರರನ್ನು ಹಾಜರುಪಡಿಸಲು ಸಾಕಷ್ಟು ಕಾಲಾವಕಾಶ ನೀಡಿದರೂ ಸಹ ಅಭಿಯೋಜನೆಯು ಅವರನ್ನು ವಿಚಾರಣೆಗೆ ಗುರಿಪಡಿಸಲು ವಿಫಲವಾಗಿದ್ದರಿಂದ ಅಭಿಯೋಜಕರ ಕೋರಿಕೆಯನ್ನು ತಿರಸ್ಕರಿಸಿ ಅಭಿಯೋಜನೆಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಯಿತು.

13. ಆರೋಪಿ-1 ಮತ್ತು 2 ರವರು ನ್ಯಾಯಾಂಗ ಬಂಧನದಲ್ಲಿದ್ದು ಅಭಿಯೋಜನೆಯ ಮುಂದುವರೆದ ಸಾಕ್ಷಿ ವಿಚಾರಣಾ ಹಂತದಲ್ಲಿ 1ನೇ ಆರೋಪಿ ಪರ ವಕೀಲರು 1ನೇ ಆರೋಪಿಗೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು ರವರು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು, 1ನೇ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. 1ನೇ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದ ನಂತರ 1ನೇ ಆರೋಪಿಯು ನ್ಯಾಯಾಲಯಕ್ಕೆ ಗೈರು

ಹಾಜರಾಗಿದ್ದು ನ್ಯಾಯಾಲಯ ಸಾಕಷ್ಟು ಸಲ ವಾರಂಟನ್ನು ಹೊರಡಿಸಿದರೂ ಸಹ 1ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲು ಅಭಿಯೋಜನೆಯು ವಿಫಲವಾಗಿದ್ದು ಆದ್ದರಿಂದ ಆತನ ಮೇಲಿನ ಪ್ರಕರಣವನ್ನು ದಿನಾಂಕಃ 31-10-2013 ರಂದು ಪ್ರತ್ಯೇಕಗೊಳಿಸಿ ಆತನ ವಿರುದ್ಧ ಪ್ರತ್ಯೇಕ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸುವಂತೆ ತನಿಖಾಧಿಕಾರಿಗೆ ಆದೇಶ ನೀಡಲಾಗಿದೆ. ನಂತರ 1ನೇ ಆರೋಪಿಯ ವಿರುದ್ಧ ಸಿ.ಸಿ.ನಂ.4826ಃ2013 ಪ್ರತ್ಯೇಕ ಪ್ರಕರಣವನ್ನು ದಾಖಲಿಸಿದ್ದು ಸದರಿ ಪ್ರಕರಣವು ಚಾಲ್ತಿಯಲ್ಲಿರುತ್ತದೆ. ಈ ಪ್ರಕರಣದಲ್ಲಿ 2ನೇ ಆರೋಪಿಯು ನ್ಯಾಯಾಂಗ ಬಂಧನದಲ್ಲಿರುವುದರಿಂದ ಆತನ ವಿರುದ್ಧ ಮಾತ್ರ ಪ್ರಕರಣವನ್ನು ಮುಂದುವರಿಸಲಾಗಿದೆ.

14. ಪ್ರಾ.ಸಾ-1 ಲಿಂಗಾನಂದಸ್ವಾಮಿ ತಮ್ಮ ಸಾಕ್ಷ್ಯದಲ್ಲಿ, ದಿ 24: 25-7-2011 ರಂದು ನಾನು ಮತ್ತು ಮತ್ತು ನನ್ನ ಹೆಂಡತಿ ಬೆಂಗಳೂರಿಗೆ ಹೋಗಿದ್ದು ಮರಳಿ ಬಂದು ನೋಡಿದಾಗ ನಮ್ಮ ಮನೆಯ ಬೀಗ ಒಡೆದಿತ್ತು, ಒಳಗಡೆ ಹೋಗಿ ನೋಡಲಾಗಿ ಮನೆಯ ಬೀರುವಿನಲ್ಲಿದ್ದ ಒಂದು ಲಕ್ಷ್ಮಿ ದೀಪ ಒಂದು ಜೊತೆ ಸಾದಾ ದೀಪಗಳು, ಒಂದು ಜೊತೆ ಕುಂಕುಮದ ಬಟ್ಟಲು, ಒಂದು ಬೆಳ್ಳಿ ಲೋಟ ಇಷ್ಟು ಕಳ್ಳತನವಾಗಿದ್ದವು. ಬೀರುವಿನಲ್ಲಿದ್ದ ಬಟ್ಟೆಗಳನ್ನು ಎಸೆದಾಡಿದ್ದರು. ಅದೇ ದಿನ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿ ಅವರು ದೂರು

ಕೊಟ್ಟೆನು. ಪ್ರಾ.ಸಾ- 1 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಾಯಂಕಾಲ ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ನಾನು ತೋರಿಸಿದ ಜಾಗದಲ್ಲಿ ಮಹಜರು ಮಾಡಿದರು. ಕಳ್ಳತನವಾದ ಒಂದು ವರ್ಷದ ನಂತರ ಪೊಲೀಸರು ನನಗೆ ಫೋನ್ ಮಾಡಿ ಕಳ್ಳತನವಾದ ವಸ್ತುಗಳು ಸಿಕ್ಕಿವೆ ಎಂದು ತಿಳಿಸಿದರು. ನಾನು ಠಾಣೆಗೆ ಹೋಗಿ ವಸ್ತುಗಳನ್ನು ಗುರ್ತಿಸಿರುತ್ತೇನೆ. ಸದರಿ ವಸ್ತುಗಳನ್ನು ನ್ಯಾಯಾಲಯದ ಆದೇಶವನ್ನು ಪಡೆದು ಬಿಡಿಸಿಕೊಂಡಿರುತ್ತೇನೆಂದು ಸಾಕ್ಷ್ಯ ನುಡಿದಿದ್ದಾರೆ. ಪ್ರಾಸಾ-1 ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು ಅಭಿಯೋಜನೆಯು ಪಾಟೀ ಸವಾಲಿನಲ್ಲಿ ಸೂಚಿಸಿದ ಸೂಚನೆಗೆ ಸರಿ ಎಂದು ಉತ್ತರಿಸಿದ್ದು ಇವರ ಸಾಕ್ಷ್ಯ ನಂಬಲರ್ಹವಾಗುವುದಿಲ್ಲ.

15. ಪ್ರಾಸಾ-2 ಶಿವಾನಂದ ಸ್ಥಳ ಪಂಚನಾಮೆಗೆ ಸಾಕ್ಷಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿ:26-7-2011 ರಂದು ಗಂಗಸಂದ್ರ ಗ್ರಾಮದಲ್ಲಿರುವ ಲಿಂಗಾನಂದಸ್ವಾಮಿ ಇವರ ಮನೆಯ ಹತ್ತಿರ ಕಳ್ಳತನವಾಗಿದ್ದ ವಿಚಾರಣ್ಕೆ ಪೊಲೀಸರು ಬೆಳಗ್ಗೆ ಮಹಜರ್ ಮಾಡಿದ್ದು ನಾನು ಸ್ಥಳದಲ್ಲಿ ಹಾಜರಿದ್ದು ನಿ.ಪಿ.2ಕ್ಕೆ ಸಹಿ ಮಾಡಿದ್ದೇನೆಂದು ಸಾಕ್ಷಿ ನುಡಿದಿರುತ್ತಾರೆ. ಇವರು ಅಭಿಯೋಜನೆಗೆ ಪೂರಕ ಸಾಕ್ಷಿ ನುಡಿದಿದ್ದು ಅಭಿಯೋಜನೆಯು ನಿ.ಪಿ.2 ರುಜುವಾತು ಪಡಿಸಿದೆ ಎಂದು ಅಭಿಪ್ರಾಯ ಪಡುತ್ತೇನೆ.

16. ಪ್ರಾ.ಸಾ.3 ತೊಳಚನಾಯಕ ತಮ್ಮ ಸಾಕ್ಷ್ಯದಲ್ಲಿ ಚಾಸಾ-13 ರವರು ನನ್ನನ್ನು ಹಾಗೂ ಚಾಸಾ-8 ರಿಂದ 10 ರವರನ್ನು ಠಾಣಾ ಗುನ್ನಾ ಸಂಖ್ಯೆ 308-11 ರಲ್ಲಿನ 1ನೇ ಆರೋಪಿಯ ಪತ್ತೆ ಬಗ್ಗೆ ನೇಮಿಸಿದ್ದು ಅದರಂತೆ ದಿಃ 1-10--2011 ರಂದು ಈ ಪ್ರಕರಣದ 1ನೇ ಆರೋಪಿಯ ಪತ್ತೆಗೆ ಹೋಗಿದ್ದು 1ನೇ ಆರೋಪಿಯ ಜೊತೆಯಲ್ಲಿ 2ನೇ ಆರೋಪಿಯು ಇದ್ದು ಅವರುಗಳನ್ನು ಎಸ್.ಎಸ್.ಐ.ಟಿ. ಬಳಿ ಹಿಡಿದು ಠಾಣೆಗೆ ಕರೆತಂದು ಚಾಸಾ- 13 ರವರ ಮುಂದೆ ಹಾಜರುಪಡಿಸಿ ವರದಿ ಕೊಟ್ಟಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ ಪ್ರಾ.ಸಾ.3 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿಃ 26-7-2011 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆ 259:2011 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಕಳಿಸಿ, ಚಾಸಾ-1 ರವರ ಮರು ಹೇಳಿಕೆ ಪಡೆದು ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಫಿರ್ಯಾದಿ ತೋರಿಸಿದ ಸ್ಥಳದಲ್ಲಿ ಪಂಚನಾಮೆ ಮಾಡಿ ನಂತರ ಮುಂದಿನ ತನಿಖೆಯನ್ನು ಪಿಎಸ್ಐ ರವರಿಗೆ ವಹಿಸಿ ಕೊಟ್ಟಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

**17.** ಪ್ರಾಸಾ-4 ಷಫೀ ತಮ್ಮ ಸಾಕ್ಷ್ಯದಲ್ಲಿ ಸುಮಾರು 3 ವರ್ಷದ ಹಿಂದೆ ರೂರಲ್ ಪೋಲಿಸ್ ಠಾಣೆಯಲ್ಲಿ ನಾನು ಸಹಿ ಹಾಕಿದ್ದೇನೆ. ನಾನು ಕೆಲಸ ಮಾಡುವ ಮಾಲೀಕರು ನಾನು ಯಾವುದೋ ಕೆಲಸಕ್ಕೆ ಹೋಗಿದ್ದಾಗ ನನ್ನ ಮತ್ತು ಚಾಸಾ-5 ರವರ ಸಹಿ ಹಾಕಿಸಿದರು. ಸಹಿ ಮಾಡುವಾಗ ನಾನು ಮತ್ತು ಚಾಸಾ-6 ಮತ್ತು ಪೋಲೀಸರು ಮಾತ್ರ ಹಾಜರ್ ಇದ್ದೆವು. ಪೋಲೀಸರು ಯಾವುದೆ ವಸ್ತುವನ್ನು ಅಮಾನತ್ ಪಡಿಸಿಕೊಂಡಿಲ್ಲ. ನಾನು ಸಹಿ ಮಾಡಿರುವ ದಾಖಲೆ ಅಮಾನತ್ ಪಂಚನಾಮೆಯಾಗಿದ್ದು ಅಸಲಿ ಪಂಚನಾಮೆಯು ಸಿಆರ್.208:12 ಪ್ರಕರಣದಲ್ಲಿ ಇದ್ದು ಆ ಪ್ರಕರಣವು ಈ ದಿನ ನ್ಯಾಯಾಲದಲ್ಲಿ ಇರುತ್ತದೆ. ಅದರಲ್ಲಿ ಇರುವ ಅಸಲಿ ನಿವೇದನೆಯನ್ನು ನೋಡಿದ್ದು ಅದರ ದೃಢೀಕೃತ ನಕಲನ್ನು ನೋಡಿದ್ದು ದೃಡೀಕೃತ ನಕಲನ್ನು ನಿಪಿ-6 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿದಾರರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ ಪಾಟೀ ಸವಾಲಿನಲ್ಲಿ ಪೊಲೀಸರು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದನ್ನು ಅಲ್ಲಗೆಳೆದಿದ್ದರಿಂದ ಅಭಿಯೋಜನೆ ನಿ.ಪಿ.6ನ್ನು ರುಜುವಾತು ಪಡಿಸಲು ವಿಫಲವಾಗಿದ್ದು ಇವರ ಸಾಕ್ಷ್ಯವು ಅಭಿಯೋಜನೆಗೆ ಯಾವುದೇ ಪ್ರಯೋಜನ ಉಂಟು ಮಾಡುವುದಿಲ್ಲ.

**18.** ಪ್ರಾಸಾ-5 ಎ.ವಿ.ಕುಮಾರ ತಮ್ಮ ಸಾಕ್ಷ್ಯದಲ್ಲಿ ನಾನು ದಿಃ 3.08.2011 ರಿಂದ 29.10.2013 ರವರೆಗೆ ತುಮಕೂರು ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ಆರಕ್ಷಕ ಉಪನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಪ್ರಾಸಾ -3 ರವರಿಂದ ಸದರಿ ಕಡತವನ್ನು ದಿಃ3.8.2011 ರಂದು ಪಡೆದಿದ್ದು ತನಿಖೆಯನ್ನು ಮುಂದುವರಿಸಿ ನಮ್ಮ ಠಾಣೆಯಲ್ಲಿ ದಾಖಲಾಗಿದ್ದ ಕ್ರೈಂ ನಂ.308ಃ11 ದಿಃ 4.9.2011 ರಂದು ದಾಖಲಾಗಿದ್ದು ಸದರಿ ಪ್ರಕರಣದಲ್ಲಿ ಬೆರಳಚ್ಚು ತಜ್ಞರು ಆ ದಿನ ಘಟನಾ ಸ್ಥಳಕ್ಕೆ ಬಂದು ಅಲ್ಲಿ ದೊರೆತ ಬೆರಳು ಮುದ್ರೆಗಳನ್ನು ಸಂಗ್ರಹ ಮಾಡಿದ್ದು ದಿಃ 6.9.2011 ರಂದು ನಮ್ಮ ಕ್ಯಾತ್ಸಂದ್ರ ಪೋಲೀಸ್ ಠಾಣೆಯ ಎಂ'ಒಬಿ ಆಸಾಮಿಯಾಗಿದ್ದ 1ನೇ ಆರೋಪಿ ಎಂಬುವನ ಬೆರಳು ಗುರುತು ಸರಿ ಹೊಂದುವ ಬಗ್ಗೆ ವರದಿ ನೀಡಿದ ಮೇರೆಗೆ ಚಾಸಾ-8 ರಿಂದ 11 ರವರು ಆರೋಪಿಯನ್ನು ಪತ್ತೆ ಮಾಡಲು ಹೇಳಿದ್ದು ಸದರಿ ಮಂಜುನಾಥ ಮತ್ತು ಆತನ ಸ್ನೇಹಿತ ರಮೇಶ ಇವರಿಬ್ಬರನ್ನೂ ದಿಃ 1.10.2011 ರಂದು ಬೆಳಗ್ಗೆ 10 ಗಂಟೆಗೆ ಚಾಸಾ-11 ರವರು ನನ್ನ ಮುಂದೆ ಹಾಜರು ಪಡಿಸಿದ್ದು ವರದಿ ನೀಡಿರುತ್ತಾರೆ. ಚಾಸಾ-8 ರಿಂದ 10 ರವರ ಹೇಳಿಕೆಯನ್ನು ಪಡದುಕೊಂಡಿರುತ್ತೇನೆ. ಚಾಸಾ-11 ರವರು ನನ್ನ ಮುಂದೆ ನೀಡಿದ ಹೇಳಿಕೆಯನ್ನು ಈಗ ನೋಡುತ್ತಿದ್ದು ಅದರ ಅಸಲು ಪ್ರತಿಯು ಸಿಸಿಃ103ಃ12 ರಲ್ಲಿ ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸದರಿ ಕಡತವನ್ನು ಈ ದಿನ ನ್ಯಾಯಾಲಯದ ಮುಂದೆ

ತರಿಸಿಕೊಂಡು ಕಡತದಲ್ಲಿ ಇರುವ ನಿಪಿ-6ನ್ನು ಸಾಕ್ಷಿಗೆ ತೋರಿಸಿದ್ದು ಅದು ಈ ಕಡತದಲ್ಲಿ ಅದರ ನಕಲು ಇದ್ದು ಅದನ್ನು ಈಗ ನಿಪಿ-8 ಎಂದು ಗುರುತಿಸಲಾಗಿದೆ. ಸದರಿ ಆರೋಪಿಗಳ ಸ್ವಇಚ್ಛಾ ಹೇಳಿಕೆಯನ್ನು ಪಡೆದು ದಿನಾಂಕ ಃ 1.10.2011 ರಂದು ನ್ಯಾಯಾಲಯಕ್ಕೆ ಹಾಜರು ಪಡಿಸಿ ದಿಃ 6.10.2011 ರ ವರೆಗೆ ಪೋಲೀಸ್ ಕಸ್ಟಡಿಗೆ ತೆಗೆದುಕೊಂಡಿರುತ್ತೇನೆ. ಆರೋಪಿಯ ಸ್ವಇಚ್ಛಾ ಹೇಳಿಕೆಗಳ ಅಸಲು ಪ್ರತಿಯು ಸಿಸಿಃ103ಃ12 ರಲ್ಲಿ ಇದ್ದು ಸದರಿ ಕಡತವನ್ನು ಈ ದಿನ ನ್ಯಾಯೂಲಯದ ಮುಂದೆ ತರಿಸಿಕೊಂಡು ಸಾಕ್ಷಿಯು ನೋಡಿರುತ್ತಾರೆ, 1ನೇ ಅರೋಪಿಯ ಸ್ವಇಚ್ಛಾ ಹೇಳಿಕೆಯ ನಕಲು ಪ್ರತಿಯನ್ನು ನಿಪಿ-9ಎಂದು, ನಕಲು ಪ್ರತಿ 2ನೇ ಅರೋಪಿಯ ಸ್ವಇಚ್ಛಾ ಹೇಳಿಕೆಯನ್ನು ನಿಪಿ-10 ಎಂದು ಗುರುತಿಸಲಾಗಿದೆ. ಸದರಿ ಆರೋಪಿಗಳ ಸ್ವಇಚ್ಛಾ ಹೇಳಿಕೆಯ ಮೇರೆಗೆ ನಮ್ಮ ಠಾಣಾ ಕ್ರೈನಂ ನಂ.259ಃ11 ಕಳ್ಳತನದಲ್ಲಿ ಭಾಗಿಯಾಗಿ ಆ ಕಳ್ಳತನದ ಮಾಲುಗಳನ್ನು ಕೋಲಾರ ಹರ್ಷವರ್ದನ ದಾರಿವಾಲ್ ಎನ್ನುವರ ಅಂಗಡಿಯಲ್ಲಿ ಮಾರಾಟ ಮಾಡಿದ ಬಗ್ಗೆ ಮಾಹಿತಿ ನೀಡಿದ್ದರ ಮೇರೆಗೆ ದಿಃ 3.10.2011 ರಂದು ಪಂಚರಾದ ಚಾಸಾ-5 ಮತ್ತು 6 ಇವರನ್ನು ಕೋಲಾರ ನಗರಕ್ಕೆ ಕರೆದುಕೊಂಡು ಹೋಗಿ ಸದರಿ ಆರೋಪಿಗಳು ತೋರಿಸಿದ ಮನೋಹರ್ ಲಾಲ್ ದಾರಿವಾಲ್ ಪಾನ್ ಬ್ರೋಕರ್ಸ್ ಅಂಗಡಿಗೆ ಕರೆದುಕೊಂಡು ಹೋಗಿ ಒಂದು ಜೊತೆ ಬೆಳ್ಳಿ ಬಟ್ಟಲು, ಒಂದು ಜೊತೆ

ಲಕ್ಷ್ಮೀ ದೀಪ, ಒಂದು ಜೊತೆ ಚಿಕ್ಕ ದೀಪದ ಕಂಬಗಳು, ಒಂದು ಬೆಳ್ಳಿ ಲೋಟ ಒಂದು ಜೊತೆ ಸಾಧಾರಣ ದೀಪದ ಕಂಬ ಸುಮಾರು 507 ಗ್ರಾಂ ತೂಕದ ಮಾಲನ್ನು ಅಮಾನತ್ ಪಡಿಸಿಕೊಂಡು ಪಂಚನಾಮೆಯನ್ನು ಮಾಡಿರುತ್ತೇನೆ. ಠಾಣಾ ಮುದ್ದೆ ಮಾಲು ಸಂಖ್ಯೆ: 147:11 ರಲ್ಲಿ ನಮೂದಿಸಿರುತ್ತೇನೆ. ದಿ: 3.10.2011 ರಂದು ಮುಮಾ-1 ರಿಂದ 5ನ್ನು ವಶಪಡಿಸಿಕೊಂಡ ಅದರ ಅಸಲು ಪ್ರತಿಯು ಸಿಸಿ:103:12 ರಲ್ಲಿ ಇರುತ್ತದೆ. ಸದರಿ ಕಡತವನ್ನು ಈ ದಿನ ನ್ಯಾಯಾಲಯದ ಮುಂದೆ ತರಿಸಿಕೊಂಡು ಕಡತದಲ್ಲಿ ಇರುವ ಅಸಲು ಪಂಚನಾಮೆಯನ್ನು ಸಾಕ್ಷಿಗೆ ತೋರಿಸಲಾಗಿ ಮತ್ತು ಅದರ ನಕಲು ಪ್ರತಿಯನ್ನು ನಿಪಿ-11 ಎಂದು ಗುರುತಿಸಲಾಯಿತು. ಮು ಮಾ-1 ರಿಂದ 5 ನ್ನು ನೋಡಿದರೆ ಗುರುತಿಸುತ್ತೇನೆ. ಚಾಸಾ-5 ರವರು ನನ್ನ ಮುಂದೆ ನಿಪಿ-6 ರಂತೆ ಹೇಳಿಕೆಯನ್ನು ನೀಡಿರುತ್ತಾರೆ. ದಿ: 6.9.2011 ರಂದು ಬೆರಳಚ್ಚು ವರದಿಯನ್ನು ಚಾಸಾ-12 ರವರಿಂದ ಪಡೆದಿರುತ್ತೇನೆ. ಅದರ ಅಸಲುಪ್ರತಿಯು ಸಿಸಿ:103:12 ರಲ್ಲಿದ್ದು ಆ ಕಡತವನ್ನು ನ್ಯಾಯಾಲಯದ ಮುಂದೆ ತರಿಸಿದ್ದು ಸಾಕ್ಷಿಯು ನೋಡಿರುತ್ತಾರೆ. ಅದರ ನಕಲು ಪ್ರತಿಯನ್ನು ಈ ಪ್ರಕರಣದಲ್ಲಿ ನಿಶಾನೆ-12 ಎಂದು ಗುರುತಿಸಲಾಗಿದೆ. ಪ್ರಾಸಾ-1 ರವರ ಮರು ಹೇಳಿಕೆ ಮತ್ತು ಚಾಸಾ-4 ರಿಂದ 6 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಆರೋಪಿಗಳ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ನನ್ನ ಮುಂದೆ ಹಾಜರು ಪಡಿಸಿದ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. 2ನೇ ಆರೋಪಿ ಈ ದಿನ ನ್ಯಾಯೂಲಯದ ಮುಂದೆ ಹಾಜರ್ ಇದ್ದು ಸಾಕ್ಷಿ ಅವರನ್ನು ಗುರುತಿಸಿರುತ್ತಾರೆ.

19. ಪ್ರಾ.ಸಾ.6 ಹರ್ಷವರ್ಧನ ದಾರಿವಾಲ್ ತಮ್ಮ ಸಾಕ್ಷ್ಯದಲ್ಲಿ 3-4 ವರ್ಷಗಳ ಹಿಂದೆ ಆರೋಪಿ ಮಂಜುನಾಥ ಮತ್ತು ರಮೇಶ ಇಬ್ಬರೂ ನನ್ನ ಅಂಗಡಿಗೆ ಚಿನ್ನ ಮತ್ತು ಬೆಳ್ಳಿ ಒಡವೆಗಳನ್ನು ಮಾರಾಟ ಮಾಡಿರುತ್ತಾರೆ. ಪೋಲೀಸರು ಅವರಿಬ್ಬರನ್ನು ಕರೆದುಕೊಂಡು ನನ್ನ ಅಂಗಡಿಗೆ ಕರೆದುಕೊಂಡು ಬಂದಿದ್ದು ಮಾರಾಟ ಮಾಡಿದ ಚಿನ್ನ ಮತ್ತು ಬೆಳ್ಳಿ ವಸ್ತುಗಳು ಕಳ್ಳತನದ ಮಾಲೆಂದು ಹೇಳಿದ್ದು ಅವುಗಳನ್ನು ಪೊಲೀಸರಿಗೆ ನೀಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಪ್ರಾ.ಸಾ.6 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಪೊಲೀಸರು ಚಿನ್ನ ಮತ್ತು ಬೆಳ್ಳಿ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡು ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದಿದ್ದು ಸದರಿ ವಸ್ತುಗಳನ್ನು ನ್ಯಾಯಾಲಯದಲ್ಲಿ ಮು.ಮಾ.1 ರಿಂದ 5 ಎಂದು ಗುರ್ತಿಸಲಾಯಿತೆಂದು, ಆರೋಪಿ ರಮೇಶ ನ್ಯಾಯಾಲಯದಲ್ಲಿ ಹಾಜರಿದ್ದರೆಂದು ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆ ಇವರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದಾಗ ಪಾಟೀ ಸವಾಲಿನಲ್ಲಿ ಸೂಚಿಸಿದ ಸೂಚನೆಗೆ ಸರಿ ಎಂದು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ

ಆರೋಪಿಗಳು ಯಾವ ಯಾವತ್ತು ನಮ್ಮ ಅಂಗಡಿಗೆ ಬಂದಿದ್ದರು ಎಂದು ನಿಖರವಾಗಿ ನನಗೆ ಹೇಳಲು ಬರುವುದಿಲ್ಲ. ಆರೋಪಿಗಳು ಯಾವ ಯಾವ ದಿನ ಬಂದು ಯಾವ ಯಾವ ವಸ್ತುಗಳನ್ನು ಕೊಟ್ಟಿರುತ್ತಾರೆ ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ನಮ್ಮ ಅಂಗಡಿಗೆ ಪಿಎಸ್‌ಐ ಕುಮಾರ್ ಮತ್ತು ಇಬ್ಬರು ಪೊಲೀಸ್ ಪೇದೆಗಳು ಆ ದಿನ ಬಂದಿದ್ದರು. ಜೊತೆಗೆ ಆರೋಪಿಗಳು ಬಂದಿದ್ದರು. ಪೊಲೀಸರು ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ, ನಾನು ಹೇಳಿರುವುದಿಲ್ಲ. ನಿ.ಪಿ.2 ಎರಡು ಪುಟಗಳದ್ದಾಗಿರುತ್ತದೆ. ಸದರಿ ಚಿನ್ನ ಮತ್ತು ಬೆಳ್ಳಿಗಳು ನಿರ್ಧಿಷ್ಟವಾಗಿ ಎಷ್ಟೆಷ್ಟು ತೂಕ ಇದೆ ಎಂದು ಹೇಳಲು ಆಗುವುದಿಲ್ಲವೆಂದು ಸಾಕ್ಷಿ ನುಡಿದಿದ್ದು ಇವರ ಸಾಕ್ಷ್ಯವನ್ನು ನಂಬಲರ್ಹವಾಗುವುದಿಲ್ಲ.

20. ಆರೋಪಿಯ ವಿರುದ್ಧ ಭಾ.ದ.ಸಂ. 457 ಮತ್ತು 380ರ ರೀತ್ಯಾ ದಂಡನೀಯವಾದ ಅಪರಾಧದ ಆರೋಪವನ್ನು ಮಾಡಲಾಗಿದೆ. ಸಾಮಾನ್ಯವಾಗಿ ಕಳುವು ಪ್ರಕರಣಗಳಲ್ಲಿ ನೇರವಾದ ಸಾಕ್ಷ್ಯ ಸಿಗುವುದು ದುರ್ಲಭ. ಆಭಿಯೋಜನೆಯು ಆರೋಪಿಯ ವಿರುದ್ಧ ತನ್ನ ಆಪಾದನೆಗಳನ್ನು ರುಜುವಾತುಗೊಳಿಸಲು ಸಾಂದರ್ಭಿಕ ಸಾಕ್ಷ್ಯವನ್ನು ಅವಲಂಬಿಸುವುದು ಅನಿವಾರ್ಯವಾಗುತ್ತದೆ. ಈ ಪ್ರಕರಣದಲ್ಲೂ ಸಹ ಅಭಿಯೋಜನೆಯು ಸಾಂದರ್ಭಿಕ ಸಾಕ್ಷ್ಯವನ್ನೇ ಅವಲಂಬಿಸಿದೆ.

ಭಾರತೀಯ ಸಾಕ್ಷ್ಯ ಅಧಿನಿಯಮ 114(ಎ) ಯಂತೆ ಕಳುವಾದ ಸ್ವತ್ತುಗಳ ಸ್ವಾಧೀನವನ್ನು ಹೊಂದಿರುವ ವ್ಯಕ್ತಿ ಆ ಸ್ವತ್ತುಗಳ ಸ್ವಾಧೀನದ ಬಗ್ಗೆ ಸಮರ್ಪಕವಾದ ವಿವರಣೆ ನೀಡದಿದ್ದಲ್ಲಿ ಆ ವ್ಯಕ್ತಿಯೇ ಸದರಿ ಸ್ವತ್ತುಗಳನ್ನು ಕಳುವು ಮಾಡಿರುತ್ತಾನೆ ಅಥವಾ ಕಳುವಾದ ಸ್ವತ್ತುಗಳೆಂದು ತಿಳಿದಿದ್ದರೂ ಅವುಗಳ ಸ್ವಾಧೀನವನ್ನು ಹೊಂದಿರುತ್ತಾನೆಂಬ ಪೂರ್ವ ಭಾವನೆ ಮಾಡಲು ಅವಕಾಶವಿದೆ. ಆದರೆ ಅಂತಹ ಪೂರ್ವಭಾವನೆಯು ಖಂಡಿಸಬಹುದಾದ ಪೂರ್ವಭಾವನೆಯಾಗಿರುತ್ತದೆ. ಆರೋಪಿಗೂ ಆರೋಪಿಸಿದ ಅಪರಾಧಕ್ಕೂ ಸಂಪರ್ಕ ಕಲ್ಪಿಸುವಲ್ಲಿ ಆರೋಪಿಯು ತಮ್ಮ ಸ್ವಾಧೀನದಲ್ಲಿ ಕಳುವಾದ ಸ್ವತ್ತುಗಳನ್ನು ಹೊಂದಿದ್ದರು ಹಾಗೂ ಕಳುವಾದ ಸ್ವತ್ತು ತಮ್ಮ ಸ್ವಾಧೀನದಲ್ಲಿರುವ ಬಗ್ಗೆ ಸಮರ್ಪಕ ವಿವರಣೆಯನ್ನು ನೀಡಿರುವುದಿಲ್ಲ ಆದ ಕಾರಣ ಆರೋಪಿಯೇ ತಮ್ಮ ಸ್ವಾಧೀನದಲ್ಲಿರುವ ಸ್ವತ್ತುಗಳನ್ನು ಕಳುವು ಮಾಡಿರುತ್ತಾರೆ ಎಂಬ ಅಂಶಗಳನ್ನು ಅಭಿಯೋಜನೆಯೇ ರುಜುವಾತು ಪಡಿಸಬೇಕಾಗಿದೆ.

೨೧. ಈ ಪ್ರಕರಣದಲ್ಲಿ ತನಿಖಾಧಿಕಾರಿ ಆರೋಪಿತರನ್ನು ಬಂಧಿಸಿ ಅವರನ್ನು ವಿಚಾರಣೆಗೆ ಗುರಿಪಡಿಸಿದಾಗ ಅವರು ಕಳುವು ಮಾಡಿದ ಬಗ್ಗೆ ಒಪ್ಪಿಕೊಂಡು ಸ್ವಇಚ್ಛಾ ಹೇಳಿಕೆ ನೀಡಿದ್ದು ಅದರ ಪ್ರಕಾರ ಆರೋಪಿತರು ಹಾಜರುಪಡಿಸಿದ

ವಸ್ತುಗಳನ್ನು ತನಿಖಾಧಿಕಾರಿಯು ಪಂಚರ ಸಮಕ್ಷಮ ನಿ.ಪಿ.6 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡು ಸಾಕ್ಷಿದಾರರ ಮರು ಹೇಳಿಕೆ ಪಡೆಯಲಾಗಿದೆಯೆಂದು ಅಭಿಯೋಜನೆ ಹೇಳಿದೆ. ಆದರೆ ಇಂಥಹ ಸಾಂದರ್ಭಿಕ ಸಾಕ್ಷ್ಯವನ್ನವಲಂಬಿಸಿರುವ ಪ್ರಕರಣಗಳಲ್ಲಿ ಅಭಿಯೋಜನೆಯು ಮಂಡಿಸುವ ಸಾಕ್ಷ್ಯವು ಉತ್ಕೃಷ್ಟ ದರ್ಜೆಯ ಸಾಕ್ಷ್ಯವಾಗಿರಬೇಕಾದುದು ಕಾನೂನಿನ ಕನಿಷ್ಟ ಅವಶ್ಯಕತೆಯಾಗಿದೆ. ಸಾಂದರ್ಭಿಕ ಸಾಕ್ಷ್ಯವು ಆರೋಪಿಯೇ ಪ್ರಶ್ನಿತ ಕೃತ್ಯವೆಸಗಿರುತ್ತಾರೆ. ಆರೋಪಿಯಲ್ಲದೆ ಬೇರೆ ಯಾರೂ ಸಹ ಪ್ರಶ್ನಿತ ಕೃತ್ಯವೆಸಗುವ ಕಿಂಚಿತ್ ಸಾಧ್ಯತೆಯು ಇಲ್ಲ ಎಂಬುದನ್ನು ನಿರೂಪಿಸಬೇಕಾಗುತ್ತದೆ.

22. ಅದೂ ಅಲ್ಲದೆ ತನಿಖಾಧಿಕಾರಿಯು ಕಳ್ಳತನವಾದ ವಸ್ತುಗಳನ್ನು ಸ್ವೀಕರಿಸಿದ ವ್ಯಕ್ತಿಯನ್ನು ಆರೋಪಿಯನ್ನಾಗಿ ಮಾಡಿರುವುದಿಲ್ಲ. ಆದ್ದರಿಂದ ಅವರಿಂದ ಕಳ್ಳತನವಾದ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆಂಬ ಸಂಶಯ ಉಂಟಾಗುತ್ತದೆ. ಹಾಗೂ ಕಳ್ಳತನವಾದ ವಸ್ತುಗಳನ್ನು ಸ್ವೀಕರಿಸಿದ ವ್ಯಕ್ತಿಯನ್ನು ಆರೋಪಿಯನ್ನಾಗಿ ಮಾಡದೇ ಇರುವುದರಿಂದ ಇದು ಅಭಿಯೋಜನೆಯ ಪ್ರಕರಣಕ್ಕೆ ಮಾರಕ ಉಂಟಾಗುತ್ತದೆ. ಅಭಿಯೋಜನೆಯು ನಿಪಿ.2 ರಂತೆ ಸ್ಥಳ ಪಂಚನಾಮೆಯನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ-1 ಮತ್ತು 2

ರವರನ್ನು ವಿಚಾರಣೆ ಮಾಡಿದ್ದು ಸದರಿ ಸಾಕ್ಷಿದಾರರು ಅಭಿಯೋಜನೆಗೆ ಪೂರಕ ಸಾಕ್ಷಿ ನುಡಿದಿದ್ದು ಅಭಿಯೋಜನೆಯು ನಿ.ಪಿ.2 ರಂತೆ ಸ್ಥಳ ಪಂಚನಾಮೆ ಮಾಡಿದ್ದನ್ನು ರುಜುವಾತು ಪಡಿಸಿದೆ. ಅದರೆ, ಅಭಿಯೋಜನೆಯು ನಿ.ಪಿ.6 ರಂತೆ ಅಮಾನತ್ತು ಪಂಚನಾಮೆಯನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ-4 ರವರನ್ನು ವಿಚಾರಣೆ ಮಾಡಿದ್ದು ಪ್ರಾಸಾ-4 ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.6 ಅಮಾನತ್ತು ಪಂಚನಾಮೆಯಲ್ಲಿ ತಮ್ಮ ಸಹಿಗಳನ್ನು ಗುರುತಿಸಿರುತ್ತಾರೆ. ಆದರೆ ಅಮಾನತ್ತು ಪಂಚನಾಮೆಯ ಅಂಶಗಳನ್ನು ನಿರಾಕರಿಸಿರುತ್ತಾರೆ. ಹೀಗೆ ಪ್ರಾಸಾ-4 ರವರು ಅಭಿಯೋಜನೆಗೆ ಪೂರ್ಣ ಪ್ರಮಾಣದ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಅಭಿಯೋಜನೆಯು ಆರೋಪಿಗಳ ವಶದಿಂದ ಗುನ್ನಾ ಸ್ಥಳದಲ್ಲಿ ಕಳ್ಳತನ ಮಾಡಿದ ವಸ್ತುಗಳನ್ನು ನಿ.ಪಿ.6 ರಂತೆ ಅಮಾನತ್ತು ಪಡಿಸಿಕೊಳ್ಳಲಾಯಿತೆಂದು ರುಜುವಾತು ಪಡಿಸಲು ವಿಫಲವಾಗಿದೆ. ಆದ್ದರಿಂದ 2ನೇ ಆರೋಪಿಯು 1ನೇ ಆರೋಪಿಯೊಂದಿಗೆ ಸೇರಿಕೊಂಡು ಅಪರಾಧ ಮಾಡಿದ್ದಾನೆಂದು ನಂಬಲು ಯಾವುದೇ ಸಾಕ್ಷ್ಯಾಧಾರಗಳು ಕಂಡು ಬಂದಿರುವುದಿಲ್ಲ ಮತ್ತು ಪ್ರಮುಖ ಸಾಕ್ಷಿದಾರರನ್ನು ವಿಚಾರಣೆಗೆ ಗುರಿಪಡಿಸಿರುವುದಿಲ್ಲ ಹಾಗೂ ಮಹತ್ವದ ಸಾಕ್ಷಿದಾರರು ಅಭಿಯೋಜನೆಗೆ ಪ್ರತಿಕೂಲ ಮತ್ತು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಅಮಾನತ್ತು ಪಡಿಸಿಕೊಂಡ ವಸ್ತುಗಳ ಜೊತೆ ಆರೋಪಿಯ ನಡುವಿನ ನಂಟನ್ನು ರುಜುವಾತುಪಡಿಸಲು

ಅಭಿಯೋಜನೆಯು ವಿಫಲವಾಗಿದೆ. ಹೀಗೆ ಆರೋಪಿಯ ವಿರುದ್ಧ ಆಪಾದಿಸಲಾದ ಆಪಾದನೆಯನ್ನು ರುಜುವಾತುಗೊಳಿಸುವ ಪ್ರಮುಖ ಕೊಂಡಿಯೇ ದುರ್ಬಲಗೊಂಡಿದೆ. ಈ ಹಿನ್ನಲೆಯಲ್ಲಿ ಸಂಶಯದ ಲಾಭವನ್ನು ಆರೋಪಿ ನಂ.2 ನೀಡಲಾಗಿದೆ.

23. ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಸಿದ್ದಪಡಿಸುವಲ್ಲಿ ಮೇಲಿನ ಸಾಕ್ಷಿದಾರರಾದ ಪ್ರಾಸಾ- 1 ರಿಂದ 6 ಇವರ ಸಾಕ್ಷಿಗಳನ್ನು ನೀಡಿದ್ದು ಸದರಿ ಸಾಕ್ಷಿಗಳು ಆರೋಪವನ್ನು ಸಿದ್ದಪಡಿಸುವಲ್ಲಿ ಮೇಲಿನ ಸಾಕ್ಷಿಗಳು ಸಾಕಾಗಬಹುದೇ ಎಂಬುದನ್ನು ಪರಿಶೀಲಿಸುವುದು ಅಗತ್ಯವಾಗಿದೆ. ಪ್ರಾಸಾ- 2, 3 ಮತ್ತು 5 ರವರು ಪೊಲೀಸ್ ಅಧಿಕಾರಿಗಳಾಗಿದ್ದು ಅವರು ತಾವು ಕೈಗೊಂಡ ಕರ್ತವ್ಯದ ಬಗ್ಗೆ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ ಹಾಗೂ ಪ್ರಾ.ಸಾ- 4 ರವರು ಅಭಿಯೋಜನೆಗೆ ಪೂರ್ಣ ಪ್ರಮಾಣದ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಮತ್ತು ಪ್ರಾಸಾ-1 ರವರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಪ್ರಾಸಾ-2, 3 ಮತ್ತು 5 ರವರ ಸಾಕ್ಷಿಗೆ ಯಾವುದೇ ಪುಷ್ಟಿದಾಯಕ ಸಾಕ್ಷಿ ನೀಡದೆ ಇರುವುದರಿಂದ ಕೇವಲ ಪ್ರಾಸಾ- 2, 3 ಮತ್ತು 5

ರವರ ಸಾಕ್ಷಿಯನ್ನು ಸಂಶಯಾತೀತವಾಗಿ ನಂಬಲು ಯಾವುದೇ ಸಾಕಷ್ಟು ಬಲವಾದ ಸಾಕ್ಷ್ಯ ಪುರಾವೆಗಳನ್ನು ಅಭಿಯೋಜನೆಯವರು ಒದಗಿಸಿಲ್ಲ. ಆದ್ದರಿಂದ ಕೇವಲ ಪೊಲೀಸ್ ಸಾಕ್ಷಿದಾರರ ಸಾಕ್ಷ್ಯದ ಆಧಾರದ ಮೇಲೆ ಆರೋಪಿಗಳ ವಿರುದ್ಧ ಅಪರಾಧವನ್ನು ಸಾಬೀತು ಪಡಿಸಲು ಸಾಧ್ಯವಾಗುವುದಿಲ್ಲ. ಅವರ ಸಾಕ್ಷ್ಯಕ್ಕೆ ಪೂರಕವಾದ ಬೇರೆ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯವು ಸಹ ಅಗತ್ಯವಾಗಿರುತ್ತದೆ.

24. ಈ ಪ್ರಕರಣದಲ್ಲಿ ಪ್ರಾಸಾ- 1 ಪಿರ್ಯಾದಿ ಮತ್ತು ಪ್ರಾಸಾ-6 ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಮತ್ತು ಪ್ರಾಸಾ-4 ರವರು ಅಭಿಯೋಜನೆಯ ಪ್ರಕರಣಕ್ಕೆ ಪೂರ್ಣ ಪ್ರಮಾಣದ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಈ ಎಲ್ಲಾ ಕಾರಣಗಳಿಂದ 2ನೇ ಆರೋಪಿಯ ವಿರುದ್ಧ ಮಾಡಲಾದ ಭಾ.ದಂ.ಸಂ. ಕಲಂ 457 ಮತ್ತು 380 ರಡಿಯಲ್ಲಿಯ ಆರೋಪವನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವಲ್ಲಿ ಅಭಿಯೋಜನೆಯು ವಿಫಲರಾಗಿದ್ದು ಆ ಕಾರಣ 2ನೇ ಆರೋಪಿ ಸಂಶಯದ ಲಾಭವನ್ನು ಪಡೆಯಲು ಅರ್ಹರಾಗಿದ್ದಾರೆ.

ಆದ್ದರಿಂದ ಸಂಶಯದ ಲಾಭವನ್ನು 2ನೇ ಆರೋಪಿಗೆ ನೀಡುತ್ತಾ ಅಂಶ ನಂ.1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

25.ಅಂಶ- 3 : ಮೇಲ್ಕಂಡ ಚರ್ಚೆಯ ಫಲಶೃತಿಯಿಂದ ಈ ಕೆಳಕಂಡಂತೆ :

**: ಆ ದೇ ಶ :**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ 2ನೇ ಆರೋಪಿಯ ವಿರುದ್ಧ ಮಾಡಲಾದ ಭಾರತೀಯ ದಂಡ ಸಂಹಿತೆ ಕಲಂ 457 ಮತ್ತು 380 ರ ಆರೋಪಗಳಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರ್ದೋಷಿಯೆಂದು ನಿರ್ಣಯಿಸಿ ಅವರನ್ನು ಬಿಡುಗಡೆಗೆ ಆದೇಶಿಸಲಾಗಿದೆ.**

**2ನೇ ಆರೋಪಿ ಮತ್ತು ಜಾಮೀನುದಾರನು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆಯನ್ನು ರದ್ದುಗೊಳಿಸಲಾಗಿದೆ.**

**ವಶಪಡಿಸಿಕೊಳ್ಳಲಾದ ಮು.ಮಾ.1 ರಿಂದ 5 ಮುದ್ದೆಮಾಲುಗಳು ಹಾಗೂ ಕಡತವನ್ನು 1ನೇ ಆರೋಪಿಯ ಮೇಲಿನ ಪ್ರಕರಣ ಮುಕ್ತಾಯವಾಗುವವರೆಗೆ ಕಾಯ್ದಿರಿಸಲು ಆದೇಶಿಸಲಾಗಿದೆ.**

**ಆರೋಪಿ-2 ರವರು ಇತರೆ ಬೇರೆ ಪ್ರಕರಣದಲ್ಲಿ ಅವಶ್ಯಕತೆಯಿಲ್ಲದಿದ್ದಲ್ಲಿ ತಕ್ಷಣ ಬಿಡುಗಡೆ ಮಾಡಲು ಜೈಲು ಅಧಿಕಾರಿಗಳಿಗೆ ಆದೇಶಿಸಲಾಗಿದೆ.**

(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ನಂತರ ಅದನ್ನು ಓದಿ, ತಿದ್ದಿ, ನಂತರ ತೆರೆದ ನ್ಯಾಯಾಲಯದಲ್ಲಿ ದಿನಾಂಕ **10-07-2015** ರಂದು ಘೋಷಿಸಲಾಗಿದೆ.)

(ಲಕ್ಷ್ಮೀ.ನಿಂ. ಗರಗ)
**1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,- 2**
**ತುಮಕೂರು.**

## ಅ ನು ಬಂ ಧ

**(1) ಅಭಿಯೋಜನೆ ಪರ ವಿಚಾರಣೆಯಾಗಿರುವ ಸಾಕ್ಷಿಗಳು :**

ಪ್ರಾ.ಸಾ-1 ಲಿಂಗಾನಂದಸ್ವಾಮಿ
ಪ್ರಾ.ಸಾ-2 ಶಿವಾನಂದ
ಪ್ರಾ.ಸಾ-3 ತೊಳ್ಯಾನಾಯಕ
ಪ್ರಾ.ಸಾ-4 ಶಫೀ
ಪ್ರಾ.ಸಾ-5 ಎ.ವಿ.ಕುಮಾರ್
ಪ್ರಾ.ಸಾ-6 ಹರ್ಷವರ್ಧನ್

**(2) ಅಭಿಯೋಜನೆ ಪರ ಹಾಜರ್ಪಡಿಸಿರುವ ದಾಖಲೆಗಳು :**

ನಿ.ಪಿ- 1 ದೂರು
ನಿ.ಪಿ. 1(ಎ) ಪ್ರಾಸಾ- 1 ರವರ ಸಹಿ

| | |
|---|---|
| ನಿ.ಪಿ-2 | ಮಹಜರ್ |
| ನಿ.ಪಿ. 2(ಎ) | ಪ್ರಾಸಾ- 1 ರವರ ಸಹಿ |
| ನಿ.ಪಿ.2(ಬಿ) | ಪ್ರಾಸಾ- 2 ರವರ ಸಹಿ |
| ನಿ.ಪಿ- 3 | ಪ್ರಾಸಾ-1 ರವರ ಹೇಳಿಕೆ |
| ನಿ.ಪಿ- 4 | ಪ್ರಾಸಾ-3 ರವರ ವರದಿ |
| ನಿ.ಪಿ-5 | ಪ್ರಥಮ ವರ್ತಮಾನ ವರದಿ |
| ನಿ.ಪಿ. 6 | ಮಹಜರ್ |
| ನಿ.ಪಿ. 7 | |
| ನಿ.ಪಿ.8 | 1ನೇ ಆರೋಪಿಯ ಸ್ವಇಚ್ಛಾ ಹೇಳಿಕೆ |
| ನಿ.ಪಿ.9 | 2ನೇ ಆರೋಪಿ ಸ್ವಇಚ್ಛಾ ಹೇಳಿಕೆ |
| ನಿ.ಪಿ.10 | ಅಸಲು ಪಂಚನಾಮೆ |
| ನಿ.ಪಿ.11 | ವರದಿ |

**3. ಅಭಿಯೋಜನೆ ಗುರ್ತಿಸಿಕೊಂಡ ಮುದ್ದೆಮಾಲುಗಳು**

| | |
|---|---|
| ಮು.ಮಾ.1 | ಒಂದು ಜೊತೆ ದೀಪ |
| ಮು.ಮಾ.2 | ಲಕ್ಷ್ಮೀ ದೀಪ |
| ಮು.ಮಾ.3 | ಒಂದು ಜೊತೆ ಚಿಕ್ಕ ದೀಪ |
| ಮು.ಮಾ.4 | ಬೆಳ್ಳಿ ಬಟ್ಟಲು |
| ಮು.ಮಾ.5 | ಬೆಳ್ಳಿ ಲೋಟ |

4. ಆರೋಪಿ ಪರ ವಿಚಾರಣೆ ಮಾಡಿರುವ ಸಾಕ್ಷಿಗಳು ಮತ್ತು ಹಾಜರ್ಪಡಿಸಿರುವ ದಾಖಲೆಗಳು : ---- ಇಲ್ಲ ----

**1ನೇ ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,- 2**
**ತುಮಕೂರು.**